ಕರ್ನಾಟಕದ ಆಧ್ಯಾತ್ಮಿಕ ಪರಂಪರೆ

ಶ್ರೀವ್ಯಾಸರಾಯರು – ಜೀವನ ಮತ್ತು ಕೃತಿಗಳು : ಒಂದು ವಿಹಂಗಮ ನೋಟ

ಶ್ರೀ ಎನ್. ಕೆ. ರಾಮಶೇಷನ್

(ಹಿಂದಿನ ಸಂಚಿಕೆಯಿಂದ)

ಶ್ರೀವ್ಯಾಸರಾಯರ ಕೃತಿಗಳು

ಶ್ರೀವ್ಯಾಸರಾಯರ ಕೀರ್ತನೆಗಳು ಅವರ ಕವಿಹೃದಯವನ್ನು ಮತ್ತು ಭಾಷಾಪ್ರೌಢಿಮೆಯನ್ನು ಪ್ರತಿಫಲಿಸುತ್ತವೆ. ಅಂತರಂಗದ ತುಡಿತ, ಬದುಕಿನ ನಶ್ವರತೆ, ಇಂದ್ರಿಯಗಳ ಚಂಚಲ ಸ್ವಭಾವ – ಇವುಗಳು ಈ ಕೆಳಗಿನ ಕೃತಿಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ:

ಪುಟ್ಟಿದೆ ಭುವಿಯೊಳಗೆ ಬಹುದಿನ ಕಳೆದನೋ...
ನೆರೆಹೊರೆಯಲಿ ಮನ ಹೋಗದಂದದಲಿ
ಕರುಣಿಸಿ ನಿಲ್ಲಿಸೋ ಸಿರಿಕೃಷ್ಣ ರಾಯಾ

ಕಾಮವೆಂಬ ಹೆಚ್ಚಿನ ಕಾಡುಗಿಚ್ಚೊಂದು ಕಡೆಯಲೆನ್ನ ಸುಡುತಲಿದೆ
ಕ್ರೋಧವೆಂಬ ಹೆಬ್ಬುಲಿ ಒಂದು ಕಡೆಯಲೆನ್ನ ತಿನ್ನುತಲಿದೆ
ಲೋಭವೆಂಬ ಮಹಾರಕ್ಕಸನೊಂದು ಕಡೆಯಲೆನ್ನ ಹೀರುತಲೈದಾನೆ
ಮೋಹವೆಂಬ ಕಗ್ಗತ್ತಲೆಯು ಕವಿದು ದಿಕ್ಕುದೆಸೆಯನು ತಿಳಿಯದಿದೆ

ಶ್ರೀಪತಿ ಪರಮ ದಯಾನಿಧೆ ದೀನನಾದೆನ್ನೊಡೆಯ ರಕ್ಷಿಸೈ, ಸಿರಿಕೃಷ್ಣ

ಭಾಗವತದಲ್ಲಿ ಬೋಧಿಸಿರುವ ನವವಿಧ ಭಕ್ತಿಯನ್ನು ಹರಿದಾಸರು ತಮ್ಮ ಕೀರ್ತನೆಗಳ ಮೂಲಕ ಕನ್ನಡದಲ್ಲಿಯೂ ಪ್ರಚುರ ಪಡಿಸಿದ್ದಾರೆ. ಅಂತೆಯೇ ಭಕ್ತರಾದ ಶ್ರೀವ್ಯಾಸರಾಯರು ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತ – ಈ ಭಾವಗಳಲ್ಲಿ ತಮ್ಮ ಆರಾಧ್ಯಮೂರ್ತಿಯನ್ನು ಸ್ತುತಿಸುತ್ತಾರೆ.

ಆಳಿದವ ನೀನು ನಿನ್ನಾಳು ನಾನು
ತಂದೆ ನೀನು ನಿನ್ನ ಕಂದ ನಾನು
ಶರಣ್ಯ ನೀನು ನಿನ್ನ ಶರಣಾಗತ ನಾನು...
ಶ್ರೀಕೃಷ್ಣಾ ! ಎನ್ನನು ಕಾಯಬೇಕೈ ತಂದೆ

ಶ್ರೀಕೃಷ್ಣನನ್ನು ಬಿಲ್ಲ ಹಬ್ಬದ ನೆಪದಿಂದ ಮಧುರೆಗೆ ಕರೆದೊಯ್ಯಲು ಉದ್ಧವ ಬಂದಾಗ, ವಿರಹ ತಾಳದೆ ಗೋಪಿಕೆಯರು ಹೀಗೆ ತೋಡಿಕೊಳ್ಳುತ್ತಾರೆ:

ಎಂದೆಂದೆನ್ನ ಮನದಿಂದ ಅಗಲದಿರೊ
ನಂದನಂದನನೇ ಆನಂದ ಮೂರುತಿಯೇ ॥ಪ॥

ಯಾಕೆ ಬೃಂದಾವನ ಯಾಕೆ ಗೋಕುಲ ನಮಗೆ
ಯಾಕೆ ಬಂದೆಯೋ ಉದ್ಧವಾ ॥ಅ.ಪ॥

ಪುಟ್ಟ ಕೃಷ್ಣನ ಕೈಯಿಂದ ಕಡೆಗೋಲನ್ನು ಪಡೆಯಲು ಯಶೋದೆ ಪ್ರಯೋಗಿಸಿದ ತಾಯ್ತನದ ಜಾಣತನ, ತಾಳ್ಮೆಗಳನ್ನು ವ್ಯಾಸರಾಯರು ಹೀಗೆ ಸೊಗಸಾಗಿ ವರ್ಣಿಸುತ್ತಾರೆ:

ಕಡೆಗೋಲ ತಾರೆನ್ನ ಚಿನ್ನವೇ ಮೊಸ
ರೊಡೆದರೆ ಬೆಣ್ಣೆ ಬಾರದು ಮುದ್ದು ರಂಗ ....

ಬಡವರ ಭಾಗ್ಯದ ನಿಧಿಯೆ ಗೋಕುಲ
ದೊರೆಯೆ ಮಾಣಿಕ್ಯದ ಹರಳೆ
ಕಡುಮುದ್ದು ಉಡುಪಿನ ಬಾಲಕೃಷ್ಣಯ್ಯನೆ
ದುಡುಕು ಮಾಡುವರೇನೋ ಪೊಂಗೊಳಲು ರಂಗ

ಬಾಲಕೃಷ್ಣನು ಕಾಳಿಂಗನ ಹೆಡೆಯನ್ನು ಮೆಟ್ಟಿ ನರ್ತಿಸಿದ ಆ ರಮಣೀಯತೆಯ ವರ್ಣನೆಯನ್ನು ಶ್ರೀವ್ಯಾಸರಾಯರು ನಾಟ್ಯಗತಿಯಲ್ಲಿಯೇ ಹಾಡಿದಂತಿದೆ:

ಕಾಳಿಂಗನಾ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು
ಕಾಲಲಿ ಗೆಜ್ಜೆ ಘಲು ಘಲು ಘಲುಕೆನ್ನೆ
ಫಾಲದಿ ತಿಲಕವು ಹೊಳೆಹೊಳೆಯುತ್ತ
ಜ್ವಲಿತ ಮಣಿಮಯ ಲಲಿತ ಪದಕಹಾರ
ಜ್ವಲಿತ ಕಾಂತಿ ಬೆಳಗುತ ದಿಕ್ಕುಗಳಲ್ಲಿ.....

ಭಗವಂತನನ್ನು ತಂದೆತಾಯಿಗಳೆಂಬಂತೆ ಶ್ರೀವ್ಯಾಸರಾಯರು ಇಲ್ಲಿ ಸ್ತುತಿಸುತ್ತಾರೆ.

ತಾಯಿಯೆಂಬೆನೆ ನಿನ್ನ ಧ್ರುವನ ತಾಯಿಯು ನಿನ್ನಂತೆ ಕಾಯ್ದಳೆ
ತಂದೆಯೆಂಬೆನೆ ನಿನ್ನ ಪ್ರಹ್ಲಾದನ ತಂದೆ ನಿನ್ನಂತೆ ಕಾಯ್ದನೆ

ಶ್ರೀವ್ಯಾಸರಾಯರಿಗೆ ಶ್ರೀಹರಿಯ ದಿವ್ಯ ಆರಾಧನೆಯೇ ಬಹು ಪ್ರಿಯವಾದ ಕಾರ್ಯ. ಕನಸುಮನಸಿನಲ್ಲಿಯೂ ಭಗವಂತನದೇ ಧ್ಯಾನ ಅವರಿಗೆ.

ಕಂಡೆ ಕನಸಿನಲಿ ಕಾರುಣ್ಯಮೂರುತಿ ಹರಿಯ
ಪುಂಡರೀಕಾಕ್ಷ ಪುರುಷೋತ್ತಮನ ಸಿರಿಯ

ಎಳೆ ತುಳಸಿ ವನಮಾಲೆಯ ರಂಗ
ಗೆಳೆ ನೀಲದ ಮೈಯ ಢಾಳವು
ಹೊಳೆವ ಪೊಂಗೊಳಲೊಪ್ಪೆ ಚೆಲುವನು ನಮ್ಮ
ನಿಲಯಕ್ಕೆ ಬಂದ ಭಾಗ್ಯವು ನೋಡಾ

ಅಂತರಂಗದಲಿ ಹರಿಯ ಕಾಣದವನೆ
ಹುಟ್ಟು ಕುರುಡನೋ

ಇನ್ನು ಹರಿದಾಸರಿಗೆ ಯಾವಾಗಲೂ ಹರಿಕಥೆಯನ್ನು ಆಲಿಸುವ ಹಂಬಲ. ಅದು ಈ ಕೆಳಗಿನ ಕೀರ್ತನೆಯಲ್ಲಿ ವ್ಯಕ್ತವಾಗಿದೆ.

ನೇತ್ರಗಳು ಹರಿಮೂರ್ತಿಯ ನೋಡುತಲಿವೆ
ಶ್ರೋತ್ರಗಳು ಹರಿಕಥೆಯ ಕೇಳುತಲಿವೆ
ರಾತ್ರಿಹಗಲು ಎನ್ನ ಮನಸ್ಸು ಶ್ರೀರಂಗನಲ್ಲಿ
ಪಾತ್ರವಾಡುತಿದೆನ್ನ ಗಾತ್ರ ಕೃಷ್ಣನ ಮುಂದೆ...

ಶ್ರೀಕೃಷ್ಣ ನಾಮದ ಮಹತ್ವವನ್ನು ಎಷ್ಟು ಕೊಂಡಾಡಿದರೂ ಸಾಲದು ಶ್ರೀವ್ಯಾಸರಾಯರಿಗೆ.

ನಿನ್ನವನೆಂದರೆ ತನ್ನನೀವ ಕೃಷ್ಣ
ಕೃಷ್ಣ ಕೃಷ್ಣ ಎಂಬುದು ಭವರೋಗಹರವಾದೊಂದೌಷಧ

ನಮೋ ನಮೋ ಶ್ರೀಕೃಷ್ಣ ಎಂಬ ಘೋಷ
ಮುಕುತಿಕನ್ನಿಕೆಯ ಮದುವೆಯ ವಾದ್ಯಘೋಷ

ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ಈ ಪ್ರಕಾರದಲ್ಲಿ ಸಾಮಾನ್ಯರಿಗೆ ಹರಿದಾಸರಾಗಿ, ಯತಿರಾಜರಾಗಿ, ರಾಜಗುರುಗಳಾಗಿ, ಉನ್ನತ ಪಂಡಿತರಾಗಿ, ಕವಿಯಾಗಿ – ಎಲ್ಲ ದರಲ್ಲಿಯೂ ಸೈ ಎನಿಸಿಕೊಂಡು, ಕನ್ನಡದ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆ ನೀಡಿದವರು, ಶ್ರೀವ್ಯಾಸರಾಯರು. ಭಗವಂತನಿಗೆ ಅವರು ಮೊರೆಯಿಡುವ ಈ ಕೀರ್ತನೆ ಅವರ ಭಗವದ್ಭಕ್ತಿಗೆ ಉತ್ತಮ ನಿದರ್ಶನ.

ಆಸೆಯೆಂಬುದು ಆರ್ಜ ಲೋಕಕ್ಕೆ ಮುಟ್ಟುತಿದೆ
ಕಾಸು ಹೋದರೆ ಕ್ಲೇಶವಾಗುತ್ತಿದೆ
ಮೋಸ ಮಾಡಿ ಮೃತ್ಯು ಬಾಹೋದು ನಾನರಿಯೆ
ವಾಸುದೇವನೆ ಎನ್ನ ದಯಮಾಡಿ ಸಲಹೋ

ದಿವ್ಯಸ್ಮೃತಿಪ್ರಭ

ಸ್ವಾಮಿ ತ್ರಿಗುಣಾತೀತಾನಂದರು ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಲ್ಲಿ ಒಬ್ಬರು. ಇನ್ನೊಬ್ಬ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ಪ್ರೇಮಾನಂದರ ತಾಯಿ ಮೂರು ಜನ ಸಾಧುಗಳನ್ನು ತಮ್ಮ ಮನೆಗೆ ಊಟಕ್ಕೆ ಕರೆದಿದ್ದರು. ಕಾರಣಾಂತರದಿಂದ ಸ್ವಾಮಿ ತ್ರಿಗುಣಾತೀತಾನಂದರೊಬ್ಬರೇ ಅವರ ಮನೆಗೆ ಹೋಗಬೇಕಾಯಿತು. ಮೂರು ಜನರಿಗೆ ಮಾಡಿದ್ದ ಅಡಿಗೆಯನ್ನು ಏನು ತಾನೆ ಮಾಡಬೇಕು? ಕರೆದಿದ್ದವರಿಗೆ ಅಸಮಾಧಾನ ವಾಯಿತು. ಆದರೆ ಸ್ವಾಮಿ ತ್ರಿಗುಣಾತೀತಾನಂದರೇ ಮೂರು ಜನಕ್ಕೆ ಮಾಡಿದ ಅಡಿಗೆಯನ್ನೂ ತಾವೇ ನಿಧಾನವಾಗಿ ಉಂಡರು. ಮನೆಯವರಿಗೆ ಗಾಬರಿ. ಮಾರನೆಯ ದಿನವೂ ಅವರು ಆರೋಗ್ಯ ವಾಗಿ ಓಡಾಡಿಕೊಂಡಿದ್ದನ್ನು ಕಂಡಮೇಲೆಯೆ ಸಮಾಧಾನ!

***

ಇನ್ನೊಮ್ಮೆ ಸ್ವಾಮಿ ತ್ರಿಗುಣಾತೀತಾನಂದರು ಬೇಲೂರು ಮಠದಲ್ಲಿದ್ದರು. ದಿನಕ್ಕೆ ಒಂದು ಬಾಳೆಹಣ್ಣನ್ನು ತಿಂದುಕೊಂಡು, ಅಲ್ಲಿನ ಬಿಲ್ವಮರದ ಕೆಳಗೆ ಕುಳಿತುಕೊಂಡು, ತಪಸ್ಸನ್ನಾಚರಿಸುತ್ತಿದ್ದರು. ಮತ್ತೊಮ್ಮೆ ಏಳೂವರೆ ಸೇರು ಹಾಲನ್ನು ಕಾಯಿಸಿ ತಾವೊಬ್ಬರೇ ಕುಡಿದರು! ಇನ್ನೊಮ್ಮೆ ದಿನಕ್ಕೆ ಕೇವಲ ಎರಡು ಅಕ್ಕಿಕಾಳುಗಳು ಮತ್ತು ಒಂದೆರಡು ಮೆಣಸಿನ ಕಾಯಿಗಳನ್ನು ತಿಂದೇ ತಿಂಗಳೆಲ್ಲಾ ಕಳೆದಿದ್ದರು!

***

೧೮೯೬ ರಲ್ಲಿ ಸ್ವಾಮಿ ವಿವೇಕಾನಂದರ ಆಣತಿಯ ಮೇರೆಗೆ ಸ್ವಾಮಿ ತ್ರಿಗುಣಾತೀತಾನಂದರು 'ಉದ್ಬೋಧನ' ಎಂಬ ಪತ್ರಿಕೆಯನ್ನು ಆರಂಭಿಸಿದರು. ಅದಕ್ಕೆ ಅವರೇ ಸಂಪಾದಕರು, ನಿರ್ವಾಹಕರು, ಮುದ್ರಣಾಲಯದ ವ್ಯವಸ್ಥಾಪಕರು ಎಲ್ಲಾ. ಅದಲ್ಲದೆ, ಚಂದಾಹಣವನ್ನು ಮತ್ತು ಲೇಖನಗಳನ್ನು ಸಂಗ್ರಹಿಸಲೂ ಅವರೇ ಮನೆಯಿಂದ ಮನೆಗೆ ನಡೆದುಹೋಗುತ್ತಿದ್ದರು, ಅದೂ ಮೈಲುಗಟ್ಟಲೆ. ಆಗ ಅವರು ದಿನಕ್ಕೆ ಒಂದು ಗಂಟೆ ಕಾಲ ಮಾತ್ರ ನಿದ್ರೆ ಮಾಡುತ್ತಿದ್ದರಂತೆ! ನಿದ್ರೆ ಬಾರದಂತೆ ಮಾಡಲು, ಕಣ್ಣಿಗೆ ತಣ್ಣೀರು ಎರಚಿಕೊಂಡು ರಾತ್ರಿಯೆಲ್ಲಾ ಕರಡಚ್ಚು ಗಳನ್ನು ನೋಡುತ್ತಿದ್ದರು. ನಿಜಕ್ಕೂ ಇವರದು ಅತಿಮಾನುಷ ಶಕ್ತಿ!

***

ಸ್ವಾಮಿ ನಿರಂಜನಾನಂದರು ಶ್ರೀರಾಮಕೃಷ್ಣರ ಇನ್ನೊಬ್ಬ ಪ್ರತ್ಯಕ್ಷಶಿಷ್ಯರು. ಒಂದು ದಿನ ಅವರು ಶ್ರೀರಾಮಕೃಷ್ಣರಿಗೆ ನಿವೇದಿಸಲು ಸಿಹಿ ತಿಂಡಿಗಳನ್ನು ಖರೀದಿಸಿಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ಒಬ್ಬಳು ಬಡವೆ ಹೆಂಗಸನ್ನು ಕಂಡರು. ಅವಳು ಒಂದು ಮಗುವನ್ನು ಎತ್ತಿಕೊಂಡು ಹೋಗುತ್ತಿದ್ದಳು. ಮಗು ಸ್ವಾಮಿಗಳ ಕೈಯಲ್ಲಿದ್ದ ಸಿಹಿತಿಂಡಿಗಳ ಪೊಟ್ಟಣವನ್ನು ನೋಡಿತು; ತನಗೂ ಬೇಕೆಂದು ಅಳತೊಡಗಿತು. ತಾಯಿ ಎಷ್ಟು ಸಮಾಧಾನ ಮಾಡಿದರೂ, ಮಗುವಿನ ಅಳು ಹೆಚ್ಚುತ್ತಲೇ ಹೋಯಿತು. ನಿರಂಜನಾನಂದರು ಆ ಮಗುವಿನ ಬಳಿ ಹೋಗಿ, ಆನಂದದಿಂದ ತಮ್ಮ ಕೈಯಲ್ಲಿ ಇರುವುದನ್ನೆಲ್ಲಾ, ಆ ಮಗುವಿಗೆ ಕೊಟ್ಟುಬಿಟ್ಟರು. ದೇವರಿಗೆ ತೆಗೆದುಕೊಂಡು ಹೋಗುತ್ತಿರುವ ಸಿಹಿತಿಂಡಿಗಳನ್ನು ತಿಂದರೆ, ತನ್ನ ಮಗುವಿಗೆ ಒಳ್ಳೆಯದಾಗುವುದಿಲ್ಲವೆಂದು ತಾಯಿ ಪ್ರತಿಭಟಿಸಿದಳು. ಆದರೂ ಕೇಳದೆ, ಸ್ವಾಮಿ ನಿರಂಜನಾನಂದರು ಎಲ್ಲವನ್ನೂ ಆ ಮಗುವಿಗೆ ಕೊಟ್ಟು ನಡೆದೇ ಬಿಟ್ಟರು. ನಂತರ ಮತ್ತೆ ಮಾರುಕಟ್ಟೆಗೆ ಹೋಗಿ, ಶ್ರೀರಾಮಕೃಷ್ಣರಿಗಾಗಿ ಸಿಹಿತಿಂಡಿಗಳನ್ನು ಖರೀದಿಸಿದರು.

***

ಶ್ರೀರಾಮಕೃಷ್ಣರ ಮತ್ತೊಬ್ಬ ಶಿಷ್ಯರಾದ ಸ್ವಾಮಿ ಯೋಗಾ ನಂದರು ಬಹಳ ಸ್ಫುರದ್ರೂಪಿ. ಅವರು ಯಾವುದೋ ಒಂದು ಊರಿಗೆ ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಒಂದು ನಿಲ್ದಾಣದಲ್ಲಿ ಸುಂದರಳಾದ ಯುವತಿಯೊಬ್ಬಳು ಹತ್ತಿದಳು. ಸ್ವಾಮಿ ಯೋಗಾನಂದರನ್ನು ನೋಡಿ ಅವಳು ಮೋಹ ಪರವಶಳಾದಳು. "ನನ್ನದೆಲ್ಲವನ್ನೂ ನಿಮ್ಮ ಪಾದಗಳಿಗೆ ಸಮರ್ಪಿಸುವೆ. ದಯಮಾಡಿ ನನ್ನನ್ನು ಸ್ವೀಕರಿಸಿ" ಎಂದು ಅಂಗಲಾಚಿದಳು. ಸ್ವಾಮಿಗಳು ಪ್ರತಿಕ್ರಯಿಸದಿದ್ದಾಗ, "ನನ್ನ ಮಾತನ್ನು ಕೇಳದಿದ್ದರೆ, ಈಗಲೇ ಅಪಾಯದ ಸರಪಳಿಯನ್ನು ಎಳೆದು ರೈಲುಗಾಡಿಯನ್ನು ನಿಲ್ಲಿಸಿ, ನನ್ನ ಮೇಲೆ ದೌರ್ಜನ್ಯ ನಡೆಸಿದಿರೆಂದು ದೂರು ನೀಡುವೆ" ಎಂದು ಬೆದರಿಸಿದಳು. ಮದ್ಯಪಾನದಿಂದ ಅವಳು ಉನ್ಮತ್ತ ಳಾಗಿದ್ದಳು. ಅಷ್ಟು ಹೊತ್ತಿಗೆ ಒಂದು ನಿಲ್ದಾಣ ಬಂತು. ತತ್ ಕ್ಷಣವೇ ಯೋಗಾನಂದರು ರೈಲಿನಿಂದ ಇಳಿದುಬಿಟ್ಟರು. ಪವಿತ್ರಾತ್ಮ ರಾದ ಸ್ವಾಮಿ ಯೋಗಾನಂದರನ್ನು ಹೀಗೆ ಕೃಪಾಮಯರಾದ ಶ್ರೀರಾಮಕೃಷ್ಣರು ಕಾಪಾಡಿದರು!